ತಯಾರಿಸಲಾಗಿರುತ್ತದೆ. ಮದುಮಗನು ಧೋತಿ, ಕುರ್ತಾ ಹಾಗೂ ಅಲ್ಲಿನ ವಿಶಿಷ್ಟ ಚೆಲಂಗ್ ಎಂಬ ಶಾಲನ್ನು ಧರಿಸುತ್ತಾನೆ. ಮಹಾರಾಷ್ಟ್ರದ ಹೆಚ್ಚಿನೆಡೆ ನವ್ವಾರಿ ಸೀರೆಗಳನ್ನು ಕಚ್ಚೆ ಹಾಕಿ ಉಡುವುದಿದೆ. ಇದು 8 ಮೀಟರ್ ಉದ್ದದ ಸೀರೆ. ಇದಲ್ಲದೆ ಚಿನ್ನದ ಬಣ್ಣದ –ಹಸಿರು ಅಥವಾ ಕೇಸರಿ ಅಂಚಿನ ರೇಷ್ಮೆಯ ಸೀರೆಯನ್ನೇ ಹೆಚ್ಚಾಗಿ ಉಡುವುದಿದೆ. ಚಂದೇರಿ ರೇಷ್ಮೆ ಅಥವಾ ಪೈಥಾನಿ ಸಿಲ್ಕ್ ಸೀರೆಗಳು ಹೆಚ್ಚು ಪ್ರಚಲಿತದಲ್ಲಿರುವಂತಹವು. ಇನ್ನು ಮದುಮಗ ಧೋತಿ ಹಾಗೂ ಜುಬ್ಬಾ ಅಥವಾ ಕುರ್ತಾವನ್ನು ಧರಿಸಿರುತ್ತಾನೆ.

ದಕ್ಷಿಣದ ಕಡೆಗೆ ಬಂದರೆ ಆಂಧ್ರಪ್ರದೇಶದ ಹಲವೆಡೆ ಮದುವಣಗಿತ್ತಿಯನ್ನು ಮಂಗಲಗಿರಿ ಸಿಲ್ಕ್, ಗದ್ವಾಲ್ ಸಿಲ್ಕ್ ಅಥವಾ ಧರ್ಮಾವರಂ ಸಿಲ್ಕ್ ಸೀರೆಯಿಂದ ಅಲಂಕರಿಸುವುದಿದೆ. ಕಾಂಜೀಪುರಂ ಸೀರೆಗಳೂ ಪ್ರಚಲಿತದಲ್ಲಿವೆ. ಮದುವೆ ಗಂಡು ಹೆಚ್ಚಾಗಿ ಬಿಳಿಯ ಧೋತಿಯನ್ನು ಉಟ್ಟು ಕುರ್ತಾ ಧರಿಸುವುದಿದೆ. ತಮಿಳುನಾಡಿನ ಹೆಚ್ಚಿನೆಡೆ ಕಂಚೀಪುರದ ಕಾಂಜೀವರಂ ಸೀರೆಯೇ ಅತ್ಯಂತ ಪ್ರಸಿದ್ಧ. ಮದುಮಗನು ರೇಷ್ಮೆಪಂಚೆ ಹಾಗೂ ರೇಷ್ಮೆಯ ವಸ್ತ್ರದ ಅಂಗಿಯನ್ನು ಧರಿಸಿರುತ್ತಾನೆ. ಕೇರಳದ ಮದುಮಗಳ ಸೀರೆಯಂತೂ ಅತ್ಯಂತ ಸುಂದರ. ಬಿಳಿ ಅಥವಾ ಕ್ರೀಂ ಬಣ್ಣದ ಚಿನ್ನದ ಜರಿಯುಳ್ಳ ಕೇರಳ ಸೀರೆಯನ್ನು ಧರಿಸುತ್ತಾಳೆ. ಮದುಮಗನು ಮುಂಡು ಧರಿಸಿ ಹೆಗಲ ಮೇಲೆ ಅಂಗವಸ್ತ್ರವನ್ನು ಧರಿಸಿರುತ್ತಾನೆ.

ನಮ್ಮ ಕರ್ನಾಟಕದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಮದುಮಗಳನ್ನು ಅಲಂಕರಿಸುತ್ತಾರೆ. ಹೆಚ್ಚಾಗಿ ರೇಷ್ಮೆ ಸೀರೆ ಉಟ್ಟು ತಲೆ ತುಂಬ ಮಲ್ಲಿಗೆಯ ಜಲ್ಲಿ ಹಾಕಿ ಮುಂದಲೆ ಬೊಟ್ಟು, ಕಿವಿಗೆ ಝುಮ್ಕಿ, ಕೊರಳಲ್ಲಿ ಬಂಗಾರದ ಆಭರಣ, ಸೊಂಟಕ್ಕೊಂಡು ಡಾಬು, ಕೈತುಂಬಾ ಚಿನ್ನದ ಹಾಗೂ ಗಾಜಿನ ಬಳೆಗಳು, ಕಾಲಲ್ಲಿ ಘಲ್ಲೆನ್ನುವ ಗೆಜ್ಜೆ, ಕಾಲಲ್ಲಿ ಕಾಲುಂಗುರ ಧರಿಸಿಕೊಂಡು ಮಂಟಪಕ್ಕೆ ಬಂದರೆ ನೋಡುವುದೇ ಚಂದ. ಹೆಚ್ಚಿನೆಡೆಗಳಲ್ಲಿ ಇದೇ ಪದ್ಧತಿ ಇದೆ. ಕಾಂಜೀವರಂ, ಧರ್ಮಾವರಂ, ಸ್ಥಳೀಯ ಬೆಂಗಳೂರು ಸಿಲ್ಕ್, ಮೈಸೂರು ಸಿಲ್ಕ್, ಇಳಕಲ್ ಸೀರೆಗಳನ್ನೂ ಉಡುವುದಿದೆ. ಆದರೆ ಹೆಚ್ಚಾಗಿ ಪ್ರಚಲಿತದಲ್ಲಿರುವುದು ಕಾಂಜೀವರಂ ಸೀರೆಗಳು. ಉತ್ತರ ಕನ್ನಡದಲ್ಲಿ ಬನಾರಸ್ ಸೀರೆಗಳು ಜನಪ್ರಿಯ. ಇನ್ನೊಂದು ಸೀರೆಯನ್ನು ಉದ್ದಕ್ಕೆ ಪಟ್ಟಿಯಂತೆ ಮಾಡಿ ಹೆಗಲ ಮೇಲೆ ಕತ್ತರಿ ಬರುವಂತೆ ಹೊದೆಸುತ್ತಾರೆ. ಕೆಲವು ಸಂಪ್ರದಾಯಗಳಲ್ಲಿ ಬಿಳಿ–ಕೆಂಪು ಅಂಚಿನ ಸೀರೆಯನ್ನು ಧರಿಸುವುದೂ ಇದೆ. ಕೆಂಪು ಬಣ್ಣದ ಜರತಾರಿ ಸೀರೆ ಉಡುವುದೂ ಇದೆ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಮಹಾರಾಷ್ಟ್ರದ ಪ್ರಭಾವವೋ ಎಂಬಂತೆ ಕಚ್ಚೆ ಹಾಕಿ ಸೀರೆ ಉಡುವ ಪದ್ಧತಿ ಇದೆ. ಇಲ್ಲಿನ ಸಾರಸ್ವತ ಮತಸ್ಥರಲ್ಲೂ ಕಚ್ಚೆ ಹಾಕುವ ಪದ್ಧತಿ ಇದೆ. ಇದಕ್ಕಾಗಿಯೇ ವಿಶೇಷ ಸೀರೆಗಳೂ ಬರುತ್ತಿವೆ.

ಇನ್ನು ಕೊಡಗಿನ ಮದುವಣಗಿತ್ತಿಯನ್ನಂತೂ ಕೊಡವ ಶೈಲಿಯಲ್ಲಿ ವಿಶಿಷ್ಟವಾಗಿ ಅಲಂಕರಿಸಿರುತ್ತಾರೆ. ಬಿಳಿ– ಕೆಂಪು ಸೀರೆಯೊಂದಿಗೆ ತಲೆಯ ಮೇಲೊಂದು ಹೊದಿಕೆಯನ್ನೂ ಧರಿಸುತ್ತಾರೆ. ಅವರು ಸೀರೆ ಉಡುವ ಶೈಲಿಯೇ ವಿಶಿಷ್ಟವಾದದ್ದು. ಬಂಜಾರಾ ಸಂಸ್ಕೃತಿಯವರ ಮದುವೆ ಉಡುಗೆಯೂ ಸುಂದರವಾದದ್ದು ವೈಶಿಷ್ಟ್ಯಪೂರ್ಣವಾದದ್ದು. ಕನ್ನಡಿ ಹಾಗೂ ಬಟ್ಟೆಯ ಚೂರುಗಳನ್ನು ಬಳಸಿದ ವಿಶಿಷ್ಟ ವಿನ್ಯಾಸದ ಬಟ್ಟೆಯನ್ನು ಮದುವೆಯ ಸಂದರ್ಭದಲ್ಲಿ ಧರಿಸುತ್ತಾರೆ. ಅಲ್ಲದೆ ಮೊಗವೀರ ಸಂಸ್ಕೃತಿಯವರು, ಮರಾಠಿ ಸಂಸ್ಕೃತಿಯ ಬುಡಕಟ್ಟು ಜನಾಂಗಗಳೂ ಅವರದೇ ಶೈಲಿಯಲ್ಲಿ ಸೀರೆಯನ್ನು ಉಡುವ ಪದ್ಧತಿಯಿದ್ದರೂ ಅದೂ ಕೇವಲ ಮದುವೆಗಾಗಿ ಮೀಸಲಾಗಿ ಹೋಗಿದೆ. ಉಳಿದ ಎಲ್ಲಾ ಕಾರ್ಯಕ್ರಮಗಳೂ ಸಾಮಾನ್ಯವಾಗಿ ಎಲ್ಲೆಡೆಯೂ ಒಂದೇ ರೀತಿ ಇರುತ್ತದೆ. ಕ್ರೈಸ್ತ ಸಂಪ್ರದಾಯದಲ್ಲಿಯೂ  ಮದುಮಗಳು ಬಿಳಿಯ ಸೀರೆಯನ್ನೋ ಬಿಳಿಯ ಮದುವೆಯ ಗೌನನ್ನೋ ಧರಿಸುವುದು ಪದ್ಧತಿ. ಬಳಿಕ ಮಾಮೂಲಿ ಜರತಾರಿ ಸೀರೆ ಅಲಂಕಾರ ಮಾಡುತ್ತಾರೆ. ಇಸ್ಲಾಂ ಸಂಪ್ರದಾಯದ ಮದುಮಗಳೂ ರೇಷ್ಮೆಯ ಸೀರೆಯನ್ನೋ ಅಥವಾ ಪಂಜಾಬಿ ಡ್ರೆಸ್ ಅಥವಾ ಕುರ್ತಾವನ್ನೋ ಧರಿಸಿ ಆಕರ್ಷಕ ಆಭರಣಗಳನ್ನು ಧರಿಸಿ ತಲೆ ಮೇಲೆ ದುಪ್ಪಟ್ಟಾ ಹಾಕುವುದು ರೂಢಿ.

‘ಹಿಂದೆ ಮದುಮಗಳಿಗೆ ಹೆಚ್ಚಾಗಿ ಧರ್ಮಾವರಂ ರೇಷ್ಮೆಯ ಸೀರೆ ಅಥವಾ ಬನಾರಸ್ ಸೀರೆಗಳಿಗೆ ಪ್ರಾಮುಖ್ಯತೆ ಕೊಡುತ್ತಿದ್ದರು. ಈಗ ಆ ಸ್ಥಾನವನ್ನು ಹೆಚ್ಚಾಗಿ ಕಾಂಜೀವರಂ ಸೀರೆ ಆಕ್ರಮಿಸಿಗೊಂಡಿದೆ. ಧರ್ಮಾವರಂ ಸೀರೆ ವೈವಿಧ್ಯತೆಯಿಂದ ಕೂಡಿದ್ದು ಆಕರ್ಷಕ ವಿಶಿಷ್ಟ ವಿನ್ಯಾಸವನ್ನು ಹೊಂದಿರುತ್ತದೆ. ಬನಾರಸ್ ಸೀರೆಯ ಬೆಳ್ಳಿಯ ಜರಿಯ ಕುಸುರಿ ಕಲೆ ಅತ್ಯಂತ ಆಕರ್ಷಕ. ಕಾಂಜೀವರಂ ಸೀರೆಗಳಲ್ಲಿ ವೈವಿಧ್ಯತೆಯಿದೆ. ಆಕರ್ಷಕ ಬಣ್ಣಗಳ ವಿನ್ಯಾಸದಲ್ಲಿ ಸುಲಭದಲ್ಲಿ ದೊರಕುತ್ತದೆ. ಸುಲಭವಾಗಿ ಲಭ್ಯವಾಗುವುದರಿಂದ ಅದನ್ನೇ ಹೆಚ್ಚಾಗಿ ಆರಿಸುತ್ತಾರೆ’ ಎನ್ನುತ್ತಾರೆ ಉಡುಪಿಯ ಜವಳಿ ವಿತರಕರಾದ ರಾಮಕೃಷ್ಣ ಪೈ ಅವರು.

‘ಮದುವೆಯ ಕಾರ್ಯಕ್ರಮ ಬಿಟ್ಟರೆ ಸಂಬಂಧಿಸಿದ ಉಳಿದ ಕಾರ್ಯಕ್ರಮಗಳಿಗೆ ಆಧುನಿಕ ಫ್ಯಾನ್ಸಿ ಸೀರೆಗಳನ್ನೇ ಆರಿಸುತ್ತಾರೆ. ಇನ್ನೊಂದು ವಿಶಿಷ್ಟ ಬೆಳವಣಿಗೆಯೆಂದರೆ ಹೇಗೆ ದಕ್ಷಿಣದ ಅನೇಕ ಕಡೆಗಳಲ್ಲಿ ಲೆಹೆಂಗಾ, ಘಾಗ್ರಾ, ಲಾಚೋ ಮುಂತಾದ ಉತ್ತರದ ಕಡೆಯ ದಿರಿಸುಗಳನ್ನು ಧರಿಸಲು ಆಸಕ್ತಿ ವಹಿಸುತ್ತಾರೋ ಅದೇ ರೀತಿ ಉತ್ತರದ ಹೆಚ್ಚಿನೆಡೆಗಳಲ್ಲಿ ಮದುವೆಯ ಪಾರ್ಟಿಗಳಿಗೆ ರಿಸೆಪ್ಷನ್ ಮುಂತಾದ ಕಾರ್ಯಕ್ರಮದಲ್ಲಿ ಕಾಂಜೀವರಂ ಅಥವಾ ದಕ್ಷಿಣ ಭಾರತದ ಬೇರೆ ಬೇರೆ ವಿನ್ಯಾಸದ ರೇಷ್ಮೆಯ ಸೀರೆಯನ್ನು ಉಡುವುದೂ ಇದೆ’ ಎಂದು ಅವರು ವಿವರಿಸುತ್ತಾರೆ. ‘ಹೆಚ್ಚಿನವರು ಹಿಂದೆ ಕೆಂಪು ಅಥವಾ ಅದಕ್ಕೆ ಸಮೀಪದ ಬಣ್ಣದ ಸೀರೆಗಳನ್ನು ಆರಿಸುವುದಿತ್ತು. ಆದರೆ ಈಗ ಬಣ್ಣದ ಬಗ್ಗೆ ಹೆಚ್ಚು ಕಾಳಜಿ ಇಲ್ಲ. ತಮಗಿಷ್ಟದ ಬಣ್ಣವನ್ನು ಆರಿಸುತ್ತಾರೆ’ ಎನ್ನುತ್ತಾರೆ.

## ಸೀರೆಗೊಪ್ಪುವ ಒಡವೆ

ಸೀರೆಯೊಂದಿಗೆ ಮದುಮಗಳು ಆಕರ್ಷಕವಾಗಿ ಕಾಣಬೇಕಿದ್ದರೆ ಅದಕ್ಕೊಪ್ಪುವ ಆಭರಣಗಳನ್ನು ಧರಿಸುವುದು ಅಗತ್ಯ. ಸಾಂಪ್ರದಾಯಿಕ ಕಾಸಿನ ಸರ, ಅಡ್ಡಿಗೆ ಸರ, ಲಕ್ಷ್ಮೀಹಾರಗಳೂ, ಅವಲಕ್ಕಿ ಸರ, ಚಕ್ರಸರಗಳು, ವೈವಿಧ್ಯಮಯ ಮುಂದಲೆಬೊಟ್ಟು, ಚೂಡಾಮಣಿ, ಮೂಗುತಿ, ಕಿವಿಯೋಲೆಗಳೂ, ಸೊಂಟದ ಪಟ್ಟಿ, ಡಾಬು, ಬಳೆ, ಕಡಗ ಇವೆಲ್ಲವೂ ಅಗತ್ಯ. ಹೆಚ್ಚಿನ ಮನೆತನಗಳಲ್ಲಿ ತಲೆತಲಾಂತರದಿಂದ ಬಂದ ಇಂತಹ ಹಳೆಯ ಚಿನ್ನದ ಆಭರಣಗಳು ಇವೆ. ಮನೆಯ ಮದುವೆಯ ಸಂದರ್ಭಗಳಲ್ಲಿ ಇದನ್ನು ಧರಿಸುತ್ತಾರೆ. ಮನೆತನದ ಸಂಸ್ಕೃತಿಯ ಸಂಕೇತವಾಗಿ ಇವುಗಳು ಬಂದಿರುತ್ತವೆ.

‘ಮದುವೆಯ ಸಂದರ್ಭದಲ್ಲಿ ಮದುಮಗಳಿಗೆ ಮಾಡುವ ಸಾಂಪ್ರದಾಯಿಕ ಅಲಂಕಾರ, ಬಳಸುವ ಬಣ್ಣ ಹಾಗೂ ಇತರ ವಸ್ತುಗಳು, ಹೂಗಳು ಎಲ್ಲವೂ ಅತ್ಯಂತ ಅರ್ಥಪೂರ್ಣ ಹಾಗೂ ಶಿಸ್ತುಬದ್ಧವಾಗಿ ಹರಿದು ಬಂದ ಕಲೆ. ಹಿಂದೆ ಮದುಮಗಳನ್ನು ಸಿದ್ಧಪಡಿಸುವುದಕ್ಕಾಗಿ ಪಾರ್ಲರ್‌ಗಳೂ ಇರುತ್ತಿರಲಿಲ್ಲ ಹಾಗೂ ಹೆಚ್ಚಿನ ಸಂಪ್ರದಾಯಸ್ಥ ಮನೆಗಳಲ್ಲಿ ಮದುಮಗಳಿಗೆ ಮಂಗಲಸ್ನಾನದ ಬಳಿಕ ಆಕೆಯನ್ನು ಮನೆಯವರನ್ನು ಹೊರತುಪಡಿಸಿ ಬೇರೆಯವರು ಮುಟ್ಟುವಂತೆಯೂ ಇರಲಿಲ್ಲ. ಹಾಗಾಗಿ ಹುಡುಗಿಯ ಅತ್ತೆಯೋ, ಅತ್ತಿಗೆಯೋ ಆಕೆಯ ಅಲಂಕಾರದ ಜವಾಬ್ದಾರಿ ಹೊರುತ್ತಿದ್ದರು. ಕರಾವಳಿ ಭಾಗದಲ್ಲಿ

